**ದಿನಾಂಕಃ 03–06–2026 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಮುಂದುವರಿದ ಪಾಟಿ ಸವಾಲುಃ ಆರೋಪಿಗಳ ಪರ ಶ್ರೀ ಜೆ ಪಿ ಎಸ್ ವಕೀಲರಿಂದ**

4. ಸಾಕ್ಷಿಗೆ ನಾಲ್ಕು ಫೋಟೋಗಳನ್ನು ಹಾಗೂ ಅದಕ್ಕೆ ಸಂಬಂಧಪಟ್ಟ ಸಿಡಿಯೊಂದಿಗೆ ತೋರಿಸಲಾಗಿ ಸಾಕ್ಷಿಯು ಸದರಿ ಫೋಟೋಗಳನ್ನು ನೋಡಿ ಗುರುತಿಸಿದ್ದು ಹಾಗೂ ಅದರಲ್ಲಿರುವ ಭಾವಚಿತ್ರ ತನ್ನದೆ ಎಂದು ಹೇಳಿದ ಕಾರಣ ಸದರಿ ಫೋಟೋಗಳನ್ನು ಒಟ್ಟಾಗಿ ನಿಡಿ–1ಕ್ಕೆ ಹಾಗೂ ಸಿಡಿಯನ್ನು ನಿಡಿ–2ಕ್ಕೆ ಸರ್ಕಾರಿ ವಕೀಲರ ತಕರಾರಿನ ಮೇರೆಗೆ ಗುರುತಿಸಲಾಯಿತು. ನಾನು ಜಮೀನಿನಲ್ಲಿ ಕಲ್ಲುಗಳನ್ನು ಆಯುತ್ತಿದ್ದಾಗ ಟ್ರಾಕ್ಟರ್ ನನ್ನ ಎದುರಿಗೆ ಬಂದು ನಿಂತಿತು, ಹೊರತು ನಾನು ಕಲ್ಲನ್ನು ಹಿಡಿದು ಯಾರಿಗೂ ಹಲ್ಲೆ ಮಾಡಲು ತಯಾರು ಇರಲಿಲ್ಲ ಎಂದು ಹೇಳುತ್ತಾರೆ. ನನ್ನ ಎದುರಿಗೆ ಟ್ರಾಕ್ಟರ್ ಬಂದು ನಿಂತ ದಿನಾಂಕಃ 09.05.2024 ಅಥವಾ 10.05.2024 ಆಗಿರುತ್ತದೆ. ಆ ದಿನ ಟ್ರಾಕ್ಟರನ್ನು 1ನೇ ಆರೋಪಿ ಚಾಲನೆ ಮಾಡುತ್ತಿದ್ದನು. ಆ ದಿನ ಆರೋಪಿತರು ಜಮೀನನ್ನು ಉಳುಮೆ ಮಾಡುತ್ತಿದ್ದರು ಎಂದು ಸೂಚಿಸುವುದು ಸರಿಯಲ್ಲ. ಸಾಕ್ಷಿ ಖುದ್ದಾಗಿ ನಾನು ಜಮೀನಿನಿಂದ ಹೋಗಬೇಕು ಎಂದು ಟ್ರಾಕ್ಟರ್ ತಂದಿದ್ದರು ಎಂದು ಹೇಳುತ್ತಾರೆ. ನನ್ನ ದೂರಿನಲ್ಲಿ ಆರೋಪಿತರು ಟ್ರಾಕ್ಟರನ್ನು ಉಳುಮೆ ಮಾಡಲು ಹಾಗೂ ನನ್ನನ್ನು ಹೆದರಿಸಲು ತಂದಿದ್ದರು ಎಂದು ಬರೆಯಲಾಗಿದೆಯೋ ಇಲ್ಲವೋ ಎಂದು ನನಗೆ ನೆನಪಿರುವುದಿಲ್ಲ. ನಾನು ಕಲ್ಲನ್ನು ಹಿಡಿದುಕೊಂಡು 1ನೇ ಆರೋಪಿಗೆ ಹೊಡೆಯಲು ಹೋದ ದೃಶ್ಯಾವಳಿಗಳು ಫೋಟೋದಲ್ಲಿ ಹಾಗೂ ವೀಡಿಯೋದಲ್ಲಿ ಸೆರೆ ಹಿಡಿಯಲಾಗಿದೆ ಎಂದು ಸೂಚಿಸುವುದು ಸರಿಯಲ್ಲ. ಆರೋಪಿತರು ತಮ್ಮ ಜಮೀನಿನಲ್ಲಿ ಟ್ರಾಕ್ಟರ್ ಸಹಾಯದಿಂದ ಉಳುಮೆ ಮಾಡುತ್ತಿದ್ದಾಗ ನಾನು ಆರೋಪಿತರ ಜಮೀನಿಗೆ ಅತಿಕ್ರಮ ಪ್ರವೇಶಿಸಿ ಹೆದರಿಸಿ ಕಲ್ಲಿನಿಂದ

ಹಲ್ಲೆ ಮಾಡಲು ಪ್ರಯತ್ನಿಸಿದ್ದೇನೆ ಎಂದು ಸೂಚಿಸುವುದು ಸರಿಯಲ್ಲ. ಕೃತ್ಯ ಸ್ಥಳ ಇರುವ ಜಮೀನು ಯಾರ ಹೆಸರಿನಲ್ಲಿ ಇದೆ ಎಂಬ ಪ್ರಶ್ನೆಗೆ ಸಾಕ್ಷಿಯು ನನ್ನ ತಂದೆ ಕೃಷ್ಣಶೆಟ್ಟಿ ರವರ ಹೆಸರಿನಲ್ಲಿದೆ ಎಂದು ಹೇಳುತ್ತಾರೆ. ಸದರಿ ಕೃಷ್ಣಶೆಟ್ಟಿ 1984ನೇ ಸಾಲಿನಲ್ಲಿ ಮೃತಪಟ್ಟಿರುತ್ತಾರೆ. ಸದರಿ ಕೃಷ್ಣಶೆಟ್ಟಿ ಮೃತಪಟ್ಟ ಬಳಿಕ ಅವರ ಸೊಸೆ ಹಾಗೂ ಮೊಮ್ಮಕ್ಕಳಾದಂತಹ ಆರೋಪಿತರು ಸದರಿ ಜಮೀನನ್ನು ಸಾಗುವಳಿ ಮಾಡುತ್ತಿದ್ದಾರೆ ಎಂದು ಸೂಚಿಸುವುದು ಸುಳ್ಳು. ಕೃಷ್ಣ ಶೆಟ್ಟಿ ರವರ ಹೆಂಡತಿ ಹೆಸರು ಏನು ಎಂಬ ಪ್ರಶ್ನೆಗೆ ಸಾಕ್ಷಿಯು ಅವರಿಗೆ ಇಬ್ಬರು ಹೆಂಡತಿಯರು ಎಂದು ಉತ್ತರಿಸುತ್ತಾರೆ. ಕೃಷ್ಣಶೆಟ್ಟಿಯವರ ಮೊದಲನೆ ಹೆಂಡತಿ ಹೆಸರು ರಂಗಮ್ಮ ಹಾಗೂ ಎರಡನೆಯ ಹೆಂಡತಿ ಹೆಸರು ಬಿಂದಮ್ಮ. ಕೃಷ್ಣಶೆಟ್ಟಿಯವರ ಹೆಂಡತಿ ರಂಗಮ್ಮನವರಿಗೆ ನಾಲ್ಕು ಜನ ಹೆಣ್ಣು ಮಕ್ಕಳು ಹಾಗೂ ಒಬ್ಬ ಗಂಡು ಮಗ ಇದ್ದರು, ಅವರುಗಳ ಹೆಸರು ಜವರಮ್ಮ, ಲಕ್ಷ್ಮಮ್ಮ, ಲಕ್ಷ್ಮಣಶೆಟ್ಟಿ, ಕಮಲಮ್ಮ ಹಾಗೂ ಸಣ್ಣಮ್ಮ. ಕೃಷ್ಣಶೆಟ್ಟಿಯವರಿಗೆ ಲಕ್ಷ್ಮಣಶೆಟ್ಟಿ ಒಬ್ಬನೇ ಮಗ ಎಂದು ಸೂಚಿಸುವುದು ಸರಿಯಲ್ಲ. ಬಿಂದಮ್ಮನವರು ಕೃಷ್ಣಶೆಟ್ಟಿಯ ಎರಡನೇ ಹೆಂಡತಿ ಎಂಬುದಕ್ಕೆ ಯಾವುದೇ ದಾಖಲೆಗಳು ಇರುವುದಿಲ್ಲ. ನಾನು ಕೃಷ್ಣಶೆಟ್ಟಿ ಯವರ ಮಗ ಅಲ್ಲ ಎಂದು ಸೂಚಿಸುವುದು ಸರಿಯಲ್ಲ. ಕೃತ್ಯ ಸ್ಥಳ ಎಂದು ಹೇಳುವ ಜಮೀನಿಗೂ ಹಾಗೂ ನನಗೂ ಯಾವುದೇ ಸಂಬಂಧ ಇರುವುದಿಲ್ಲ ಎಂದು ಸೂಚಿಸುವುದು ಸರಿಯಲ್ಲ. ಕೃತ್ಯ ಸ್ಥಳ ಇದೆ ಎಂದು ಹೇಳುವ ಜಮೀನನ್ನು ಕಾನೂನುಬಾಹಿರವಾಗಿ ನಾನು ಹೊಂದಲು ಹಾಗೂ ನನ್ನ ಹೆಸರಿಗೆ ಮಾಡಿಕೊಳ್ಳಲು ಸುಳ್ಳು ಫಿರ್ಯಾದನ್ನು ನೀಡಿ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದು ಸೂಚಿಸುವುದು ಸರಿಯಲ್ಲ.

5. ಆರೋಪಿತರ ವಿರುದ್ಧ ಇದುವರೆವಿಗೂ 8-10 ದೂರುಗಳನ್ನು ಸಂಬಂಧಪಟ್ಟ ಪೊಲೀಸ್ ಠಾಣೆಗೆ ನೀಡಿದ್ದೇನೆ. ಕೃತ್ಯ ಸ್ಥಳ ಇದೆ ಎನ್ನುವ ಜಮೀನನ್ನು ನನಗೆ

ಮಾಡಿಸಿಕೊಡಿ ಎಂದು ಪೊಲೀಸರಿಗೆ ಹಲವಾರು ದೂರನ್ನು ನೀಡಿದ್ದೇನೆ ಎಂದು ಸೂಚಿಸುವುದು ಸರಿಯಲ್ಲ. ದಿಃ09.05.2024 ರಂದು ಅಥವಾ 10.05.2024 ರಂದು ಬೆಳಿಗ್ಗೆ 10.00 ಗಂಟೆ ಸಮಾರಿಗೆ 1ನೇ ಆರೋಪಿ ಟ್ರಾಕ್ಟರ್ ನೊಂದಿಗೆ ಜಮೀನಿಗೆ ಬಂದಿದ್ದನು. ನಿಡಿ-1 ರಲ್ಲಿ 1ನೇ ಆರೋಪಿ ಉಳುಮೆ ಮಾಡುತ್ತಿರುವುದು ಕಂಡು ಬರುತ್ತದೆ ಎಂದು ಸೂಚಿಸುವುದು ಸರಿಯಲ್ಲ, ಸಾಕ್ಷಿ ಖುದ್ದಾಗಿ 1ನೇ ಆರೋಪಿ ಟ್ರಾಕ್ಟರ್ ನೊಂದಿಗೆ ಜಮೀನಿಗೆ ಬಂದಿದ್ದನು ಎಂದು ಹೇಳುತ್ತಾರೆ. ಆ ಸಮಯದಲ್ಲಿ ನಾನು, ನನ್ನ ಹೆಂಡತಿ ಹಾಗೂ 2ನೇ ಆರೋಪಿ ಮಹೇಶ್ ಸದರಿ ಜಮೀನಿನಲ್ಲಿ ಇದ್ದೆವು. ನಾನು ಹಾಗೂ ನನ್ನ ಹೆಂಡತಿ ಜಮೀನಿನಲ್ಲಿದ್ದಾಗ 1ನೇ ಆರೋಪಿ ಟ್ರಾಕ್ಟರ್ ನಲ್ಲಿ ಬಂದನು ಹಾಗೂ 2ನೇ ಆರೋಪಿ ನಡೆದುಕೊಂಡು ಬಂದನು. ಆ ಸಮಯದಲ್ಲಿ ನನ್ನ ಹೆಂಡತಿ ಗೌರಮ್ಮ ನನ್ನ ಸಮೀಪವೇ ಜಮೀನಿನ ಕೆಲಸ ಮಾಡುತ್ತಿದ್ದರು. ಆ ದಿನ ನನ್ನ ಹೆಂಡತಿ ಜಮೀನಿನಲ್ಲಿ ಇರಲಿಲ್ಲ ಹಾಗೂ ಅಲ್ಲಿಗೆ ಬಂದಿರಲಿಲ್ಲ ಎಂದು ಸೂಚಿಸುವುದು ಸರಿಯಲ್ಲ.

6. ಆ ದಿನ 1ನೇ ಆರೋಪಿ ಟ್ರಾಕ್ಟರ್ ನಿಂದ ಇಳಿದು ಬಂದು ನನಗೆ ಗುದ್ದಿದನು. ಸದರಿ ಸಂಗತಿಯನ್ನು ನನ್ನ ದೂರಿನಲ್ಲಿ ಹಾಗೂ ಹೇಳಿಕೆಯಲ್ಲಿ ಬರೆಸಿದ್ದೇನೆ. ಆ ದಿನ 1ನೇ ಆರೋಪಿ ಟ್ರಾಕ್ಟರ್ ನಿಂದ ಇಳಿದು ಬಂದು ನನಗೆ ಗುದ್ದಿದನು ಎಂದು ಸುಳ್ಳು ಸಾಕ್ಷ್ಯ ಹೇಳಿದ್ದೇನೆ ಎಂದು ಸೂಚಿಸುವುದು ಸರಿಯಲ್ಲ. ಸದರಿ ಜಾಗದಲ್ಲಿ ಕೃತ್ಯ ಸಮಯದಲ್ಲಿ ನನಗೆ ಪ್ರಜ್ಞೆ ತಪ್ಪಿದ ಕಾರಣ ಬಿದ್ದು ಹೋದೆನು ಕಾರಣ ನಾನು ಎಷ್ಟು ಸಮಯದವರೆಗೂ ಸದರಿ ಕೃತ್ಯ ಸ್ಥಳದಲ್ಲಿ ಬಿದ್ದಿದ್ದೆನು ಎಂದು ಹೇಳಲು ಆಗುವುದಿಲ್ಲ. ನಾನು ಆಸ್ಪತ್ರೆಗೆ ಬಂದ ಬಳಿಕ ಪ್ರಜ್ಞೆ ಬಂದಿರುತ್ತದೆ, ಎಷ್ಟು ಸಮಯದ ಬಳಿಕ ಪ್ರಜ್ಞೆ ಬಂದಿತು ಎಂದು ಹೇಳಲು ಆಗುವುದಿಲ್ಲ. ನನ್ನನ್ನು ಆಂಬುಲೆನ್ಸಿನಲ್ಲಿ ಆಸ್ಪತ್ರೆಗೆ ರಂಗಸ್ವಾಮಿ ಹಾಗೂ ಗುರುಮೂರ್ತಿ

ರವರು ಚಿಕಿತ್ಸೆಗಾಗಿ ಆಸ್ಪತ್ರೆಗೆ ಕರೆದುಕೊಂಡು ಬಂದರು ಎಂಬ ವಿಚಾರ ಬಳಿಕ ನನಗೆ ತಿಳಿಯಿತು. ಸದರಿ ರಂಗಸ್ವಾಮಿ ಹಾಗೂ ಗುರುಮೂರ್ತಿ ರವರು ಆರೋಪಿತರ ವಿರುದ್ಧ ನಾನು ದೂರನ್ನು ನೀಡುವುದಕ್ಕಿಂತ ಮೊದಲೇ ಮತ್ತೊಂದು ದೂರನ್ನು ದಾಖಲ್ಮಾಡಿದ್ದರು ಎಂಬ ಸೂಚನೆಗೆ ಸಾಕ್ಷಿಯು ಅದರ ವಿಚಾರ ನನಗೆ ಗೊತ್ತಿಲ್ಲ, ಆದರೆ ರಂಗಸ್ವಾಮಿ ಆರೋಪಿತರ ವಿರುದ್ಧ ಯಾವುದೋ ವಿಚಾರಕ್ಕೆ ದೂರನ್ನು ಕೊಟ್ಟಿರಬಹುದು ಎಂದು ಹೇಳುತ್ತಾರೆ. ಸದರಿ ರಂಗಸ್ವಾಮಿ ಹಾಗೂ ಗುರುಮೂರ್ತಿ ಸಂಬಂಧದಿಂದ ಅಣ್ಣತಮ್ಮ ಎಂದು ಸೂಚಿಸುವುದು ಸರಿಯಲ್ಲ, ಅವರಿಬ್ಬರೂ ಬೇರೆ ಬೇರೆ ಎಂದು ಹೇಳುತ್ತಾರೆ. ರಂಗಸ್ವಾಮಿ ಹಾಗೂ ಗುರುಮೂರ್ತಿ ರವರ ಸೂಚನೆಯಂತೆ ಆರೋಪಿತರು ಉಳುಮೆ ಮಾಡುವ ಜಮೀನನ್ನು ಅವರಿಂದ ಕಸಿದುಕೊಳ್ಳುವ ಸಲುವಾಗಿ ಸುಳ್ಳು ದೂರನ್ನು ದಾಖಲ್ಮಾಡಿ ಸುಳ್ಳು ಸಾಕ್ಷಿ ಹೇಳಿದ್ದೇನೆ ಎಂದು ಸೂಚಿಸುವುದು ಸರಿಯಲ್ಲ.

ಈ ಹಂತದಲ್ಲಿ ಆರೋಪಿಗಳ ಪರ ವಕೀಲರು ಮುಂದಿನ ಪಾಟಿ ಸವಾಲು ಮಾಡಲು ಸಮಯ ಕೋರಿದ್ದು, ಸದರಿ ಆರೋಪಿಗಳ ಪರ ವಕೀಲರ ಮನವಿಯನ್ನು ಪುರಸ್ಕರಿಸಿ ಮುಂದಿನ ದಿನಾಂಕದಂದು ತಪ್ಪದೇ ಈ ಸಾಕ್ಷಿಯ ಪಾಟಿ ಸವಾಲನ್ನು ಮುಕ್ತಾಯಗೊಳಿಸಲು ಸೂಚಿಸಿ ಮುಂದಿನ ಪಾಟಿ ಸವಾಲಿಗೆ ಸಮಯ ನೀಡಲಾಗಿದೆ.

(ಸಾಕ್ಷಿಯ ಸಾಕ್ಷ್ಯವನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)

ಓ.ಹೇ.ಕೇ.ಸರಿ ಇದೆ.

2ನೇ ಅಧಿಕ ಜಿಲ್ಲಾ ಮತ್ತು ಸೆಷನ್ಸ್
ನ್ಯಾಯಾಧೀಶರು, ಹಾಸನ.